# ಸ್ಟಾರ್ಟಪ್ ಸ್ಥಾಪನೆಯಲ್ಲಿ ಗ್ರಾಮೀಣರೇ ಮುಂದು

## ನ್ಯಾಸ್ಕಾಮ್ ಪ್ರಾದೇಶಿಕ ಮುಖ್ಯಸ್ಥ ಅಶೋಕ್ ಪಾಮಿಡಿ ಮಾಹಿತಿ | 'ಸೃಷ್ಟಿ'ಯಲ್ಲಿ ನವೋದ್ಯಮ ವಿಚಾರಸಂಕಿರಣ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ), 'ವಿಜಯವಾಣಿ' ಪತ್ರಿಕೆ ಮತ್ತು 'ದಿಗ್ವಿಜಯ ನ್ಯೂಸ್' ಚಾನಲ್‌ನ ಮಾಧ್ಯಮ ಸಹಯೋಗದಲ್ಲಿ ಮೈಸೂರು ರಸ್ತೆಯ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿರುವ ಮೂರು ದಿನಗಳ ತಾಂತ್ರಿಕ ವಿದ್ಯಾರ್ಥಿಗಳ ಪ್ರಾಜೆಕ್ಟ್ ಪ್ರದರ್ಶನ ಮತ್ತು ಸ್ಪರ್ಧೆ 'ಸೃಷ್ಟಿ'ಯಲ್ಲಿ ಎರಡನೇ ದಿನವಾದ ಶನಿವಾರ ವಸ್ತುಪ್ರದರ್ಶನದೊಂದಿಗೆ ವಿಚಾರಸಂಕಿರಣ ನಡೆಯಿತು.

ವಿಷಯ ತಜ್ಞರು 'ಸ್ಟಾರ್ಟ್ ಅಪ್ ಆ್ಯಂಡ್ ಇನ್ನೋವೇಷನ್' ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

**» ಸ್ಟಾರ್ಟಪ್ ಕ್ಷೇತ್ರಕ್ಕೆ ನಗರದ ಕೊಡುಗೆ ಶೇ. 47 ಮಾತ್ರ**

ವಿಜಯವಾಣಿ ದಿಗ್ವಿಜಯ 24X7 NEWS ಮಾಧ್ಯಮ ಸಹಯೋಗ

ನ್ಯಾಸ್ಕಾಮ್ ಪ್ರಾದೇಶಿಕ ವಿಭಾಗದ ಮುಖ್ಯಸ್ಥ ಅಶೋಕ್ ಪಾಮಿಡಿ ಮಾತನಾಡಿ, ದೇಶದಲ್ಲಿ 7,450 ಸ್ಟಾರ್ಟ್ ಅಪ್ (ನವೋದ್ಯಮ) ಗಳಿವೆ. ಪ್ರತಿದಿನ ಮೂರು ಸಾರ್ಟಆಪ್‌ಗಳು ಹುಟ್ಟಿಕೊಳ್ಳುತ್ತಿವೆ. ಇವುಗಳಿಗಾಗಿಯೇ 140 ಉತ್ತೇಜನ ಕೇಂದ್ರಗಳನ್ನು ತೆರೆಯಲಾಗಿದೆ. ಆ ಮೂಲಕ ವಿದ್ಯಾರ್ಥಿಗಳ ಹೊಸ ಆಲೋಚನೆಗೆ ಮೂರ್ತ ರೂಪ ನೀಡುವ ಕೆಲಸ ನಡೆಯುತ್ತಿದೆ. ವಿಶೇಷ ಎಂದರೆ ಕೇವಲ ಶೇ.47 ಸ್ಟಾರ್ಟಅಪ್‌ಗಳು ನಗರದ ಭಾಗದಿಂದ ಬಂದರೆ, ಉಳಿದವು ಗ್ರಾಮೀಣ ಭಾಗದಿಂದ ಬರುತ್ತಿವೆ. ಕೌಶಲ ಮತ್ತು ಸೃಜನಶೀಲತೆ ಇರುವ ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆಯುತ್ತಿದೆ. ಕಳೆದ ವರ್ಷ ನಮ್ಮ ಕಂಪನಿಯಿಂದಲೇ 15 ಸಾವಿರ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಿದ್ದೇವೆ ಎಂದರು.



ಅಶೋಕ್ ಪಾಮಿಡಿ

2015ರಲ್ಲಿ 4,200ರಿಂದ 4,400 ಸ್ಟಾರ್ಟ್ ಆಪ್‌ಗಳು ಬಂದಿವೆ. 2020ರ ವೇಳೆಗೆ ಈ ಸಂಖ್ಯೆ 12 ಸಾವಿರಕ್ಕೆ ಹೋಗಲಿದೆ. ನಾವು ಓದುವ ಸಮಯದಲ್ಲಿ ಕೇವಲ ಸರ್ಕಾರಿ ಉದ್ಯೋಗಕ್ಕೆ ಹೋಗಬೇಕಾಗಿತ್ತು. ಇಂದು ಕಾಲ ಬದಲಾಗಿದೆ, ಉದ್ಯೋಗಿ ಮಾತ್ರವಲ್ಲ ಉದ್ಯೋಗದಾತರೂ ಆಗಬಹುದು ಎಂದರು.



ಅಂಗವಿಕಲರಿಗಾಗಿ ಬೆಳಗಾವಿಯ ನಿಡಸೋಸಿಯ ಹೀರಾ ಶುಗರ್ಸ್ ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿರುವ ವಿದ್ಯುತ್ ಚಾಲಿತ ವಾಹನ.

ವಿಜಯವಾಣಿ ಚಿತ್ರಗಳು

**ಈ** ಹಿಂದೆ ಎಲ್ಲಿಯೂ ಕೆಲಸ ಸಿಗದವರು ಮಾತ್ರವೇ ಅಂಗಡಿ ತೆರೆಯುತ್ತಿದ್ದರು. ಆದರೆ, ಅದಕ್ಕೆ ಸ್ಟಾರ್ಟ್‌ಆಪ್ ಎಂಬ ಶೀರ್ಷಿಕೆ ಇರಲಿಲ್ಲ. ಇಂದು ಕಾಲ ಬದಲಾಗಿದೆ. ಈಗ ಸರ್ಕಾರಿ ಉದ್ಯೋಗವನ್ನೇ ತೊರೆದು ಹೊಸ ಅವಿಷ್ಕಾರಗಳೊಂದಿಗೆ ಕಂಪನಿ ತೆರೆಯುವವರೇ ಹೆಚ್ಚು.

| ಡಾ.ಸಮೀರ್ ಕೆ. ಕಾಗಲ್ಕರ್
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರ ಹೆಚ್ಚುವರಿ ಆಪ್ತಕಾರ್ಯದರ್ಶಿ



### ಅಂಗವಿಕಲರಿಗೆ ವಿದ್ಯುತ್‌ಚಾಲಿತ ವಾಹನ

**ಬೆ**ಳಗಾವಿಯ ನಿಡಸೋಸಿಯ ಹೀರಾ ಶುಗರ್ಸ್ ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿಗಳು ಅಂಗವಿಕಲರಿಗಾಗಿ ನೆರವಾಗುವ ವಿದ್ಯುತ್‌ಚಾಲಿತ ವಾಹನ ಆವಿಷ್ಕರಿಸಿದ್ದಾರೆ. ಸದ್ಯ ಮಾರುಕಟ್ಟೆಯಲ್ಲಿ ಮನೆ ಒಳಗೆ ಅಥವಾ ಹೊರಗಡೆ ಸಂಚರಿಸಬಹುದಾದ ವಾಹನಗಳಿವೆ. ಆದರೆ, ಎರಡು ಕಡೆ ಚಲಿಸುವ ಹೈಬ್ರಿಡ್ ವಾಹನ ಇಲ್ಲ. ಈ ಕಾಲೇಜಿನ ವಿದ್ಯಾರ್ಥಿಗಳು ಇದನ್ನು ಸಂಶೋಧಿಸಿದ್ದಾರೆ. ಕಾಲು ಇಲ್ಲದ ವ್ಯಕ್ತಿ ಈ ವಾಹನದೊಂದಿಗೆ ಹೊರಗಡೆ ಸಂಚರಿಸಬಹುದಾಗಿದೆ. ಇದನ್ನು ರೂಪಿಸಲು ವಿದ್ಯಾರ್ಥಿಗಳು 11 ಸಾವಿರ ರೂ. ವೆಚ್ಚ ಮಾಡಿದ್ದಾರೆ. ಮೆಕಾನಿಕಲ್ ವಿಭಾಗದ ವಿದ್ಯಾರ್ಥಿಗಳಾದ ರಾಹುಲ್‌ರಾಜ್, ಪ್ರವೀಣ ತೋಟಗಿ, ಕಾಜಾ ದಫೇದಾರ, ಅಕ್ಷಯ ಕೋಟಿ ರೂಪಿಸಿದ್ದಾರೆ. ಈ ಸಾಧನೆಗೆ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಪ್ರಥಮ ಬಹುಮಾನ ನೀಡಿ ಗೌರವಿಸಿದೆ.